50(2)

Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 86] ಗುರುವಾರ 28–11–46 [ಬಿಡಿ ಪ್ರತಿ 3 ಪೈ

ಲಂಡನ್ ಆಹ್ವಾನಕ್ಕೆ ಮುಸ್ಲಿಂ ಲೀಗಿನ ಅಂಗೀಕಾರ ಕಾಂಗ್ರೆಸ್, ಸಿಕ್ಖರ ನಿರಾಕಾರ

ಲಂಡನ್ ಆಹ್ವಾನಕ್ಕೆ ಮುಸ್ಲಿಂ ಲೀಗಿನ ಅಂಗೀಕಾರ

ನವದೆಹಲಿ ನ 27 — ಲಂಡನ್ ಸಮ್ಮೇಳನದ ಆಹ್ವಾನವನ್ನು ಮುಸ್ಲಿಂ ಲೀಗ್ ಮನ್ನಿಸಿತು. ಬ್ಯಾ|| ಜಿನ್ನಾ ಮತ್ತು ಎಂ|| ಲಿಯಾಖತ್ ಆಲಿಖಾನರು ಲಂಡನ್ನಿಗೆ ವೈಸ್ರಾಯರನ್ನು ಹಿಂಬಾಲಿಸುವರು.

ನವದೆಹಲಿ ನ 27 — ಲಂಡನ್ ಸಮ್ಮೇಳನದ ಆಹ್ವಾನವನ್ನು ಕಾಂಗ್ರೆಸ್ ಮತ್ತು ಸಿಕ್ಖರು ನಿರಾಕರಿಸಿರುವರೆಂದೂ ವೈಸರಾಯರಿಗೆ ಈ ವಿಷಯ ತಿಳಿಸಲಾಗಿದೆಯೆಂದೂ ಹೇಳಲಾಗಿದೆ.

ದ. ಆಫ್ರಿಕಾ ವಿರುದ್ಧ ಪ್ರದರ್ಶನ

ಮಾಸ್ಕೊ ನ 25 — ನ್ಯೂಯಾರ್ಕಿನ ದ. ಆಫ್ರಿಕಾ ರಾಯಭಾರಿ ಕಚೇರಿ ಎದುರಿಗೆ 2 ಗಂಟೆ ಕಾಲ ದ. ಆಫ್ರಿಕಾ ವಿರುದ್ಧ ನೂರಾರು ಮಂದಿ ಘೋಷಣೆಗಳ ಬಾವುಟ ಹಿಡಿದು ಪ್ರದರ್ಶನ ನಡೆಸಿದರು.

ಷಿಯಾ ಮುಸ್ಲಿಮರು ಏನು ಹೇಳುತ್ತಾರೆ ?

ಕೋಮುವಾರು ಕಾಳಾಗ್ನಿಯು ಭಾರತವನ್ನು ಪ್ರಹಿಸುತ್ತಿರುವುದು ಸ್ಥಾಕಿ ಸ್ಥಾನ ಬೇಡಿಕೆಯಿಂದ, ಎಂಬದಾಗಿ ಅಖಿಲ ಭಾರತ ಷಿಯಾ ಸಮ್ಮೇಳನದ ಅಧ್ಯಕ್ಷ ಸಯದಲ್ಲಿ ಅಲಿ ಜಾಹೀರರು ತಿಳಿಸಿರುವರು ಅಲ್ಲದೆ ಮುಸ್ಲಿಂಲೀಗಿನ ಕೃತ್ಯಕ್ಕೆ ಕಾಂಗ್ರೆಸ್ ಹೋಗುತ್ತಿದೆ. ಷಿಯಾ ಪಂಗಡವು ಕೋಮುವಾರು ಗಲಭೆಯಿಂದ ದೂರ ವಿರಬೇಕು ಎಂದು ಹೇಳಿರುವರು.

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ನ 28— ಮೈಸೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ತಾ || 30 ಶನಿವಾರ ಬೆಳಿಗ್ಗೆ 9-30 ಗಂಟೆಗೆ ಸೇರುವುದೆಂದು ತಿಳಿಯು ಬಂದಿದೆ.

ಲಂಡನ್ನಿಗೆ ವೈಸರಾಯರ ಪ್ರಯಾಣ

ನವದೆಹಲಿ ನ 27 — ಬ್ರಿಟಿಷ್ ಸರಕಾರದೊಡನೆ ಮಾತುಕತೆ ನಡೆಸಲು ವೈಸರಾಯರು ತಾ|| 30 ನೇ ಶನಿವಾರ ಲಂಡನ್ನಿಗೆ ಪ್ರಯಾಣ ಮಾಡುವರು. ಸು ಮಾರು 10-ದಿವಸ ಗೈರುಹಾಜರಾಗಿರುವರು. ಆ ಕಾಲದಲ್ಲಿ ಸರ್ ಜಾಕ್ ಲಿನ್ ವೀಲರನ್ನು ಹಂಗಾಮಿ ವೈಸರಾಯರಾಗಿ ರಾಜರು ನೇಮಿಸಿದ್ದಾರೆ

ಅಮೆರಿಕಾದಿಂದ ಭಂಗಾರ

ಕರಾಚಿ ನ 26 — 480 ಪೌಂಡು ಭಂಗಾರವು ಅಮೇರಿಕಾದಿಂದ ವಿಮಾನದಲ್ಲಿ ಬಂದಿದೆ.

ಒಂದೊಂದು ಸಂಸಾರಕ್ಕೆ ರೂ ೨೫೦

ರಾಂಗಂಜ್ ನ 26 — ಈಚಿನ ಗಲಭೆಯಲ್ಲಿ ತುತ್ತಾದ ಸಂಸಾರಗಳು ತಮ್ಮ ಮನೆಗಳನ್ನು ಸರಿಪಡಿಸಿಕೊಳ್ಳಲು ಪ್ರತಿ ಸಂಸಾರಕ್ಕೂ 250 ರೂ. ಗ್ರಾಂಟು ಕೊಡಲಾಗುವುದು. ಹೀಗೆ 16 ಸಂಸಾರಗಳಿಗೆ ಕೊಡಲಾಯಿತು.

ಮುಷ್ಕರಗಾರರು ಕೆಲಸಕ್ಕೆ ಬರುತ್ತಿದ್ದಾರೆ

ಬೆಂಗಳೂರು ನ 26 — ಇಲ್ಲಿಯ ಮಹಾರಾಜಾ ಮಿಲ್ಲಿನ ಮುಷ್ಕರ ಹಿಡಿದಿದ್ದ ಕೆಲಸಗಾರ ಸ್ಟೈಕ ಹೆಚ್ಚು ಮಂದಿ ಕೆಲಸಕ್ಕೆ ಒರುತ್ತಿರುವರೆಂದು ತಿಳಿಯು ಬಂದಿದೆ

ಜಪಾನ್ ರಾಜಮನೆತನದವರ ಭವಿಷ್ಯ

ಟೋಕಿಯೋ ನ 27— ನಿನ್ನೆ ಪ್ರಾರಂಭವಾದ ಜಪಾನ್ ಪಾರ್ಲಿಮೆಂಟಿನ ವಿಶೇಷಾಧಿವೇಶನದಲ್ಲಿ ಜಪಾನು ರಾಜಮನೆತನದವರ ಭವಿಷ್ಯವು ನಿರ್ಧರಿಸಲಾಗುವುದೆಂದು ಗೆದತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ನಿಧಿ ಮತ್ತು ಬಿನ್ನವತ್ತಳೆ

.....

ಸಕ್ಕರೆ ಕೆಲಸಗಾರರ ಸಂಘದ ತೀರ್ಮಾನ

ಮೈಸೂರು ಸಕ್ಕರೆ ಕಂಪೆನಿ ಕೆಲಸಗಾರರ ಸಂಘದ ಕಾರ್ಯನಿರ್ವಾಹಕ ಮಂಡಲಿಯ ಸಭೆಯು 26–11–46 ನೇ ದಿನ ಉಪಾಧ್ಯಕ್ಷರಾದ ಶ್ರೀ ಹೆಚ್. ಎಸ್. ಮಾಸ್ತಿಗೌಡರವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು.

ಪಂಡಿತ ಮದನಮೋಹನ ಮಾಳವೀಯರ ಮತ್ತು ಟಿ. ಪಿ. ಕೈಲಾಸಂರವರ ನಿಧನಕ್ಕಾಗಿ ಸಂತಾಪ ಸೂಚನೆ.

ಪಂಡಿತ ಜವಾಹರಲಾಲ್ ನೆಹರು ರವರ ವರ್ಧಂತಿ ಪ್ರಯುಕ್ತ ಅವರನ್ನು ಅಭಿನಂದಿಸುವುದು.

ಶ್ರೀ ಅಣ್ಣಯ್ಯನವರು ಜನರಲ್ ಸೇಜರ್ ಆದುದಕ್ಕೆ ಸಂತೋಷ ವ್ಯಕ್ತ ಪಡಿಸುವುದು.

ಕಂಪೆನಿಯು ಕೆಲಸಗಾರರಿಗೆ ಅಸಲು ಬೆಲೆಗೆ ಸಕ್ಕರೆ ಕೊಡಬೇಕೆಂದು ಪ್ರಚಾರ ಪಡಿಸುವುದು.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ.ಸಿ. ರೆಡ್ಡಿಯವರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡುವಾಗ ಅವರನ್ನು ಸಂಘಕ್ಕೆ ಬರಮಾಡಿಕೊಂಡು ರೂ. 101 ನಿಧಿ ಹಾಗೂ ಬಿನ್ನವತ್ತಳೆಯನ್ನು ಕೊಡಲಕ್ಕೆ ದ್ದೆಂದೂ ಅದಕ್ಕಾಗಿ ಶ್ರೀಗಳಾದ ಎಂ. ಮಹಾಬಲರಾವ್, ಹೆಚ್. ಎಸ್. ಮಾಸ್ತಿ ಗೌಡ, ಬಿ ಎಸ್ ಕೃಷ್ಣಪ್ಪ, ಎಸ್ ಕೃಷ್ಣಯ್ಯ, ಎ. ರಾಮಣ್ಣ (ಸಂಚಾಲಕ) ಉಳ್ಳ ಒಂದು ಸಮಿತಿಯನ್ನು ನೇಮಿಸಲಾಯಿತು.

.....

ಕಲ್ಲಿಜ್ಜಲು ಮುಷ್ಕರ ಪ್ರತಿಧ್ವನಿ

ವಾಷಿಂಗ್ಟನ್, ನ 25 — ಅಮೇರಿಕಾದಲ್ಲಿ ಕಲ್ಲಿಜ್ಜಲು ಗಣಿ ಮುಷ್ಕರದಲ್ಲಿ ಭಾಗಿಗಳಾಗಿರುವ ನಾಲ್ಕು ಲಕ್ಷ ಮಂದಿಯ ಮುಖಂಡ ಲೂಯಿ ಸರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ಸಮ್ಮೇಳನ

ಡಿಸೆಂಬರ್ ತಾ|| 18 ರಲ್ಲಿ ದೆಹಲಿಯಲ್ಲಿ ಭಾಷಾವಾರು ಪ್ರಾಂತಗಳ ಸಮ್ಮೇಳನ ಸೇರುವುದಾಗಿ ತಿಳಿಯು ಬಂದಿದೆ.

ರಾಜೀನಾಮೆ

ಕೋಲಾರ ಚಿನ್ನದ ಗಣಿಯ ಶ್ರೀ ಜಿ. ಕೆ. ಕೃಷ್ಣ ನಾಯರ್ ಶಾಸನ ಸಭೆಗೆ ರಾಜೀನಾಮೆ ಇತ್ತಿದ್ದಾರೆ.

ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಅಲ್ಟಿಮೇಟಂ

ಬೆಂಗಳೂರು, ನ 26 — ವಿದ್ಯಾರ್ಥಿ ಪ್ರತಿನಿಧ್ಯದೊಡನೆ ವೈಸ್ ಛಾನ್ಸಲರು ವರ್ತಿಸಿದ ನೀತಿ ರೀತಿಯನ್ನು ಸಂಘದವರು ಪರಿತೀಲಿಸಿ ವೈಸ್ ಛಾನ್ಸಲರ್ ಸಂಘದ ಪ್ರತಿನಿಧಿಗಳೊಡನೆ ಸಂಧಾನ ನಡೆಸದಿದ್ದರೆ ಇದೇ ತಾ || 28 ರಿಂದ ಮುಷ್ಕರ ನಡೆಸಬೇಕೆಂದು ತೀರ್ಮಾನಿಸಿದೆ.

ಪಾಟ್ನಾ, ನ 27 — ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷ ಡಾ || ಮೂಂಜೆ ಕಾಂಗ್ರೆಸಿಗೆ ಅರ್ಪಿಸಿರುವ ಮನವಿಯಲ್ಲಿ ಕೇಂದ್ರ ಸರ್ಕಾರದ ಕಾಂಗ್ರೆಸ್ ಸದಸ್ಯರು ಎಷ್ಟೇ ಎಡರುತೊಡರುಗಳು ಬಂದರೂ ಪದವಿಗೆ ರಾಜೀನಾಮೆಯನ್ನು ಕೊಡಲೇಕೊಡಕೂಡದು ಎಂದೂ ಆಗ ಬ್ರಿಟೀಷ ಪ್ರಭುತ್ವದ ವ್ಯವಹಾರಗಳು ವಿಶ್ವದ ಬೆಳಕಿಗೆ ಬರುವುದೆಂದೂ ಭಾರತ ಒಗ್ಗಟ್ಟು ಮತ್ತು ಸ್ವತಂತ್ರ ಹೋರಾಟದಲ್ಲಿ ತಮ್ಮ ಸಂಪೂರ್ಣ ಸಹಕಾರವಿರುವುದಾಗಿಯೂ ತಿಳಿಸಿದ್ದಾರೆ.

ವೃತ್ತಾಂತ ಸಂಗ್ರಹ

ಈಜಿಪ್ಟ್‌ದಲ್ಲಿ ಸರಕಾರದ ವಿರುದ್ಧ ಲೇಖನಗಳನ್ನು ಒರೆಯುವ ಪತ್ರಿಕಾ ಪ್ರತಿನಿಧಿಗಳಿಗೆ ಶಿಕ್ಷೆ ವಿಧಿಸಲು ಬೇಕಾದ ಒಂದು ಪ್ರತ್ಯೇಕ ಕಾರಾಗೃಹ ರಚಿಸಲು ೨೦೦೦ ಇಜಿಪ್ಷಿಯನ್ ಪವನುಗಳು ಮಂಜೂರಾಗಿವೆ.

ಂ ಂ

ಇತ್ತೀಚೆಗೆ ಬರ್ಲಿನ್ ಭೂಗರ್ಭದಲ್ಲಿ ಶೋಧಿಸಲ್ಪಟ್ಟ ಕರ ಪತ್ರಗಳಲ್ಲಿ ಹಿಟ್ಲರನ ದೇಹದಲ್ಲಿ ಲಖಃ ದಷ್ಟು ಯಹೂದಿ ರಕ್ತವಿದ್ದುದರಿಂದಲೇ (ಅಪನ ಆಜ್ಜಿ ಯಹೂದಿ ಸ್ತ್ರೀ) ನಾಜೀ ಜರ್ಮನಿಗೆ ಸೋಲುಂಟಾಯಿತು ಎಂದು ಬರೆದಿತ್ತು.

ಂ ಂ

ಒಲಂಪಿಯಾದಲ್ಲಿ ರೊಬರ್ಟ್ ರೈಟ್ ಎಂಬ ಸೈನಿಕನು ಈ ಮೊದಲ ಮತ್ತು ಎರಡನೇ ಜಾಗತಿಕ ಸಂಗ್ರಾಮದಲ್ಲಿ ಸೇವೆ ಸಲ್ಲಿಸಿದ್ದಾನೆ ಪೆನ್ಷನಿಗೆ ಬರೆದುಕೊಂಡ ಈತ ಅವಿವಾಹಿತ ಅವನಿಗೆ ಯುದ್ಧ ಇಲಾಖೆಯಿಂದ ದೊರೆತ ನಿರಾಶಾಜನಕವಾದ ಉತ್ತರ, ನೀನು ರಣಕ್ಷೇತ್ರದಲ್ಲಿ ಮಡಿದಿರುವಿಯೆಂದು ವದಿಯಾಗಿದೆ ಆದುದರಿಂದ ಪೆನ್ಷನಿಗೆ ಒರೆದುಕೊಳ್ಳುವುದಾದರೆ ನಿನ್ನ ವಿಧವೆ ಬರೆಯುಬೇಕು.

ಂ ಂ

ನ್ಯೂಯಾರ್ಕಿನಲ್ಲಿ ಧೂಮ್ರಪಾನ ಮಾಡುವವರ ಜಗ್ಗೆ ಒಂದು ಶಾಲೆ ತೆರೆಯಲ್ಪಟ್ಟಿದೆ. ಯಾವ ರೀತಿಯಲ್ಲಿ ಸೇದುವುದು ಸುಯಾದ ರೀತಿಯಲ್ಲಿ ಸೇದುವುದು ಸರಿಯಾದ ಕ್ರಮವೆಂದು ಕಲಿಸಲಾಗುತ್ತಿದೆ. ಹೊಗೆಸೊಪ್ಪನ್ನು ಸುಟ್ಟಾಗ ಹೊರಡುವ ನಿಕೋಟಿನ್ನಿನ ಕಲೆಯಾಗದಂತೆ ಕಲಿವ ಕಲೆಯೇ ಮುಖ್ಯ.

ಂ ಂ

ಮಿಲ್ಕ್ ಚಿತ್ರದಲ್ಲಿ ಅಭಿನಯಿಸಿದ ಹೊಸ ನಟ ಓರ್ವ ಐ. ಸಿ ಎಸ್ ಅಧೀಸರ ಪತ್ನಿ ಈಗ ದಾಂಪತ್ಯವಿಚ್ಛೇದಕ್ಕಾಗಿ ಅರ್ಜಿ ಹಾಕಿವಳೆಂದು ಸುದ್ದಿ. ಗಂಡನು, ಅವಳು ಚಿತ್ರದಲ್ಲಿ ಅಭಿನಯಿಸಿದ್ದಕ್ಕೆ ಆಕ್ಷೇಪಿಸಿದನಂತೆ.

ಪಾನ ನಿರೋಧ ಧಾಳಿ

ಕಡಪಾ — ಪಾನ ನಿರೋಧ ಇಲಾಖಾ ಇನ್‌ಸ್ಪೆಕ್ಟರ್ ಮಡವೇಡಿ ಪಲ್ಲಿಯಲ್ಲಿ ಧಾಳಿ ನಡೆಸಿ ಕೆಂಡ ಹೊಂದಿದ್ದ ಒಂಭತ್ತು ಮಂದಿಯನ್ನು ದಸ್ತಗಿರಿಮಾಡಿದರು. ಆಕುತೋಟಪಲ್ಲಿ ಮತ್ತು ಡಿನ್ನಕಾತೇರುಪಲ್ಲಿಯಲ್ಲೂ ಹೆಂಡ ತಯಾರಿಸುತ್ತಿದ್ದ ಹನ್ನೊಂದು ಮಂದಿ ಪತ್ತೆಗಿಳಿ ಮಾಡಲ್ಪಟ್ಟಿದ್ದಾರೆ

೮ ಖಂಡಿ ಭಾರದ ಹಳೆಯ ತುಬಾಕಿ

ನೆಲದಡಿಯಿಂದ ದೊರೆಕಿತು

ಕುಂಭಕೋಣ ತಾ|| 18 — ಹನ್ನೊಂದು ಅಡಿ ಉದ್ದವಿರುವ ಬುಡಕಡೆಯಲ್ಲಿ 69 ಮತ್ತು 38 ಇಂಚು ಸುತ್ತಳತೆಯುಳ್ಳ ಒಂದು ಹಳೆ ತುಬಾಕಿಯು ವಿಲ್ಲುಪುರದ ಬಳಿ ನೆಲದಡಿಯಿಂದ ದೊರೆತಿದೆ. ಇದರಲ್ಲಿ 1158 ಎಂದು ಒಂದು ಬಳೆಯಲ್ಲೂ ಅಂಕಿತವಾಗಿದೆ. ಇದು 8 ಖಂಡಿ ಭಾರವಿದೆ. ಇದನ್ನೀಗ ವಿಲ್ಲುಪುರ ಮುನಿಸಿಪಲ್ ಹೈಸ್ಕೂಲಿನ ಪರಿಸದಲ್ಲಿ ಇರಿಸಲಾಗಿದೆ.

ಜಾತೀಯ ದ್ವೇಷಕ್ಕೆ ವಿರೋಧ

ಐಕ್ಯರಾಷ್ಟ್ರ ಸಂಘದ ನಿರ್ದೇಶ

ನ್ಯೂಯೋರ್ಕ್ ತಾ|| 20 — ಮತವರ್ಗಗಳನ್ನು ಆಧಾರವಾಗಿಟ್ಟುಕೊಂಡು ಪಕ್ಷಪಾತ ಮಾಡುವ ವ್ಯವಸ್ಥೆಗಳು ಯಾವ ರಾಷ್ಟ್ರದಲ್ಲೂ ಸಾಧುವಲ್ಲವೆಂಬ ತಾತ್ಪರ್ಯದ ಒಂದು ನಿರ್ಣಯವನ್ನು ಇವತ್ತು ಐಕ್ಯರಾಷ್ಟ್ರ ಸಂಘವು ಸರ್ವಾನುಮತದಿಂದ ಅಂಗೀಕರಿಸಿದೆ.

At Opera

5th Glorious Week

ಶ್ರೀ ಮುರುಗ

From 29–11–46

ಕಾಳಿ ಎಸ್. ರತ್ನ, ಬಿ.ಎಸ್.ದೊರೆರಾಜ್
ಸ್ವಾಮಿನಾಥ್, ಬಿ.ಎಸ್- ಕೃಷ್ಣವೇಣಿ
ರಾಜಾಕಾಂತಂ ಪಾತ್ರವಹಿಸಿರುವ

ಉತ್ತಮಿ

(ತಮಿಳು ಚಿತ್ರ)

Morning Shows From 29-11'46
DILLINGER

Edited, Printed and Published by M. S Krishna Rao at the Satyavadi Press Chamaraj Agrahar Mysore.

ಸತ್ಯ ವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಕರಾವಳಿ ನಾವೆಯು ಜಲ ಸಮಾಧಿ

ರೂ೧ ಲಕ್ಷ ಹಾನಿ

ಕರಾಚಿ ತಾ|| 19 — ಕಟ್ಟಡದ ಪೋವು ತೆಂಗಿನ ಹುರಿ ಮತ್ತು ಇತರ ಸಾಮಾನುಗಳನ್ನು ಹೇರಿಕೊಂಡು ಕಲ್ಲಿಕೋಟೆಯಿಂದ ಕರಾಚಿಗೆ ಕೊಂಡುಹೋಗುತ್ತಿದ್ದ 'ದೇವಿಯಾರ' ವೆಂಬ ನಾವೆಯೊಂದು ಬಿರುಗಾಳಿ ಸಿಲುಕಿ ಕೇಟಂ ಬಂದರದ ಬಳಿ ಮುಳುಗಿ ರೂ 1 ಲಕ್ಷ ನಷ್ಟ ಸಂಭವಿಸಿದೆ. 12 ಜನ ನಾವಿಕರು ಈಜಿಕೊಂಡು ಪಾರಾಗಿರುವರು

ಮೈಸೂರು ಸಿಟಿ ರೇಷನಿಂಗ್

No. R 6 - 81 / 1946-47

1946 ನೇ ಇಸವಿ ನವೆಂಬರ್ ತಿಂಗಳ 30 ನೇ ತಾರೀಖು ಶನಿವಾರದ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರಕಾರಿ ಇಲ್ಲಿಂದ ಮೊಹಲ್ಲಾ ಸಭಾ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಶಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ನುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

20–11–46

At Ranjit——— From 28–11–46

ಹುಮಾಯೂನ್

ಅಶೋಕಕುಮಾರ್ ವೀಣಾ ನಾಗೇಸ್ ಚಂದ್ರಮೋಹರ್

ಪಾತ್ರವಹಿಸಿರುವರು

HUMAYUN

ಸುಖ ಆರೋಗ ಆನಂದದಾಯಕ



ಜೀವಿತಕ್ಕೆ

ಸ್ವೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ಪರಿಮಳವನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏಜೆಂಟರಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮಂಡಿಪೇಟೆ.